ಮಾಡಲು ಸಾಧ್ಯವಿಲ್ಲ" ಎಂದ.

ಕಾಮತ್ ಒಂದು ಕ್ಷಣ ವಿಚಲಿತನಾದ ಮತ್ತೆ ಅದೇ ದರ್ಪದ ದನಿಯಲ್ಲಿ, "ನೋಡಿ ಇನ್‌ಸ್ಪೆಕ್ಟರ್, ನಿಮ್ಮ ಇಲಾಖೆಯವರು ಇಲ್ಲಿಗೆ ಹತ್ತಾರು ಬಾರಿ ಬಂದಿದ್ದಾರೆ. ನನ್ನನ್ನು ಹಲವಾರು ಬಾರಿ ಸ್ಟೇಶನ್‌ಗೆ ಕೂಡಾ ಕರೆಸಿದ್ದರು. ಕನ್ನಡ ಸಿನಿಮಾದ ಖ್ಯಾತ ಕತೆಗಾರನಾದರೂ ನನ್ನ ಸ್ವಪ್ರತಿಷ್ಠೆಯನ್ನು ಪಕ್ಕಕ್ಕಿಟ್ಟು ತನಿಖೆಗೆ ಸಹಕರಿಸಿದೆ. ನನ್ನ ಕೆಲಸ ಕಾರ್ಯಗಳಿಗೆ ಹೊಡೆತ ಬಿದ್ದರೂ ಸುಮ್ಮನೆ ಸಹಿಸಿಕೊಂಡೆ. ನನ್ನಮೇಲೆ ಏನಾದರೂ ಪಕ್ಕಾ ಸಬೂತು ಇದ್ದರೆ ಬನ್ನಿ, ಇಲ್ಲವಾದರೆ ಹೊರಡಿ."

"ಅಯ್ಯೋ, ಆ ಥರ ಏನೂ ಇಲ್ಲ ಸಾರ್. ತಪ್ಪು ತಿಳೀಬೇಡಿ. ಇಲ್ಲಿಗೆ ಬಂದದ್ದು ಡ್ಯೂಟಿ ವಿಚಾರವಾದರೂ ನಿಜವಾದ ಅರ್ಥದಲ್ಲಿ ನಿಮ್ಮನ್ನು ನೋಡಿಕೊಂಡು ಹೋಗಲಿಕ್ಕೆ ಬಂದಿದ್ದು. ರಿಟೈರ್ ಆದಮೇಲೆ ಆ ಅವಕಾಶ ಇರಲ್ಲ ನೋಡಿ..." ಮತ್ತೆ ತನ್ನ ಹಳದಿ ಹಲ್ಲನ್ನು ತೋರಿಸುತ್ತಾ ಕಪಟ ನಗೆ ನಕ್ಕ.

ಸ್ವಲ್ಪ ನಿರಾಳನಾಗಿ, "ಡ್ರಿಂಕ್ಸ್ ಏನಾದರೂ ತಗೋತೀರಾ... ಹೆಣ್ಣಿಲ್ಲದ ಮನೆ. ಕಾಫಿ, ಟೀ ಸಿಗಲ್ಲ..." ತನ್ನ ಕುರ್ಚಿಯಿಂದೆದ್ದ ಕಾಮತ್. ಅವನೊಡನೆ ನಾಗರಾಜಯ್ಯನೂ ಎದ್ದ. ಅಗಾಧ ಶರೀರ ಹೊತ್ತಿದ್ದರೂ ತಗ್ಗಿನಲ್ಲಿ ಕುಳಿತಿದ್ದವ ಧಡಕ್ಕನೆ ಎದ್ದಿದ್ದು ನೋಡಿ ಒಂದು ಕ್ಷಣ ಕಾಮತ್ ಗಾಬರಿ ಆದ. ನಾಗರಾಜಯ್ಯ ಅದೇ ಕಪಟ ವಿನಯದಿಂದ, "ಡ್ಯೂಟಿ ಸಮಯ ಸಾರ್, ನನಗೆ ಬೇಡ ನೀವು ತೆಗೆದುಕೊಳ್ಳಿ" ಅಂದ. ಅಚಾನಕ್ಕಾಗಿ ಅವರಿಬ್ಬರ ಕಣ್ಣುಗಳು ಮತ್ತೆ ಸಂಧಿಸಿದವು. ಅದೇ ಹೊಳಪು, ಆಕರ್ಷಣೆ... ಆ ಕಣ್ಣಿನ ತೀಕ್ಷ್ಣತೆಗೆ ಶರಣಾಗಿ ಬಿಡಬಹುದು ಎಂಬ ಹೆದರಿಕೆಯಿಂದ ಕಾಮತ್ ಬೇರೆಡೆ ಕಣ್ಣು ಹೊರಳಿಸಿದ. ಸಣ್ಣ ಭಯ ಅವನನ್ನು ಆವರಿಸಿತು. ಅದೇ ಭಯದಲ್ಲಿ ಒಂದು ಪೆಗ್ ಒಳಸೇರಿತ್ತು.

"ಸಾರ್, ನಿಜವಾಗಿಯೂ ನಿಮಗೂ ಆ ಆನಂದ ರಾಮ್‌ಗೂ ಏನು ವೈಮನಸ್ಸು?"

"ಆನಂದರಾಮ್ ನನ್ನ ಬಳಿ ಅಸಿಸ್ಟೆಂಟ್ ಆಗಿ ಬಂದ. ಚೆನ್ನಾಗಿ ಬರೀತಾನೆ ಅಂತಾ ನನ್ನ ಮನೇಲೇ ಇಟ್ಟುಕೊಂಡು ಸಾಕಿದೆ. ನನ್ನ ಕೆಲವು ಸಿನಿಮಾಗಳಿಗೆ ನನ್ನೊಂದಿಗೆ ಸಹ ಬರವಣಿಗೆಗಾರ ಅಂತಾ ಕ್ರೆಡಿಟ್ ಕೊಡಿಸಿದೆ. ನಾನು ಏನಾದರೂ ಸಿನಿಮಾ ಡೈರೆಕ್ಟ್ ಮಾಡಿದರೆ ನೀನೇ ಕತೆ ಚಿತ್ರಕತೆ ಬರೆಯುವಂತೆ ಎಂದಿದ್ದೆ. ಅದೇನು ನನ್ನಮೇಲೆ ದ್ವೇಷ ಬಂದಿತೋ ಅಥವಾ ಯಾರಾದರೂ ಹೇಳಿಕೊಟ್ಟರೋ ತಿಳಿಯದು, ನನ್ನ ಮೇಲೆ ತಿರುಗಿಬಿದ್ದ. ನಾನು ಕಳೆದ ನಾಲ್ಕು ಐದು ವರ್ಷದಲ್ಲಿ ಬರೆದಿದ್ದ ಚಿತ್ರಕತೆ ಎಲ್ಲಾ ಅವನೇ ಬರೆದಿದ್ದು ನಾನು ಅದನ್ನು ಕದ್ದಿದ್ದೇನೆ ಎಂದು ಫಿಲ್ಮ್ ಚೇಂಬರ್‌ಗೆ ದೂರು ಕೊಟ್ಟ. ಅಲ್ಲಿಯೂ ನನ್ನ ಪರ ತೀರ್ಪು ಬಂದಿದ್ದರಿಂದ ಕೋರ್ಟ್‌ಗೆ ಹೋಗುವ ಬೆದರಿಕೆ ಹಾಕಿ ಲಾಯರ್ ನೋಟಿಸ್ ಕೂಡಾ ಕಳುಹಿಸಿದ್ದ. ನನಗೂ ಬೇಸರ ಆಗಿತ್ತು, ಇಲ್ಲ ಅಂತಲ್ಲ. ಆದರೆ ಅವನು ನನ್ನ ಬಳಿ ಬೆಳೆದವನು; ನನ್ನ ಶಿಷ್ಯ. ಅವನನ್ನು ಕೊಲ್ಲುವ ಕಟುಕ ನಾನಲ್ಲ."

"ನಿಮ್ಮಿಂದ ಬೇರೆ ಆದಮೇಲೆ ಅವರ ನಾಲ್ಕು ಚಿತ್ರಗಳು ಸೂಪರ್ ಹಿಟ್ ಆದವು. ಮತ್ತೆ ಅವರಿಗೆ ಡೈರೆಕ್ಷನ್ ಮಾಡುವ ಅವಕಾಶ ಸಿಕ್ಕಿತು. ನಿಮಗೆ ಆ ಅವಕಾಶ ತಪ್ಪಿತು ಅಲ್ಲವಾ ಸಾರ್?"

"ಮತ್ತೆ ಸುತ್ತಿ ಬಳಸಿ ಅದೇ ವಿಚಾರಕ್ಕೆ ಬರುತ್ತಿದ್ದೀರಿ ಇನ್‌ಸ್ಪೆಕ್ಟರ್..." ಮತ್ತೊಂದು ಪೆಗ್ ಏರಿತು.

"ನಮ್ಮಲ್ಲಿರುವ ಸಾಕ್ಷಿಗಳನ್ನು ಅವಲೋಕಿಸಿದರೆ ನಿಮ್ಮಮೇಲೆ ಅನುಮಾನ ಪಡಬಹುದೇ